ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 12ನೇ ಸಂಚಿಕೆ ಕೊಪ್ಪ 15-11-1987 ಭಾನುವಾರ ಬೆಲೆ 50 ಪೈಸೆ

ಜಿಲ್ಲಾ ಮಟ್ಟದ ಷಟಲ್ ಬ್ಯಾಡ್ಮಿಂಟನ್

ಚಿಕ್ಕಮಗಳೂರು : ಇಲ್ಲಿನ ಪೋಲೀಸ್ ಷಟಲ್ ಬ್ಯಾಡ್ಮಿಂಟನ್ ಕ್ಲಬ್ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಷಟಲ್ ಬ್ಯಾಡ್ಮಿಂಟನ್ ಟೋರ್ನಮೆಂಟನ್ನು ಡಿಸೆಂಬರ್ 4, 5 ಮತ್ತು 6 ರಂದು ಏರ್ಪಡಿಸಿದೆ.

ಟೋರ್ನಮೆಂಟಿನಲ್ಲಿ ಪುರುಷರ ಸಿಂಗಲ್ಸ್ ಮತ್ತು ಡಬ್ಬಲ್ಸ್ ಹಾಗೂ ವಯಸ್ಕರ (40 ವರ್ಷ ಮೇಲ್ಪಟ್ಟವರ) ಸಿಂಗಲ್ಸ್ ಮತ್ತು ಡಬ್ಬಲ್ಸ್ ಸ್ಪರ್ಧೆಗಳು ಇರುತ್ತವೆ.

ಭಾಗವಹಿಸಲಿಚ್ಛಿಸುವವರು ಪ್ರವೇಶ ಶುಲ್ಕ ಸಿಂಗಲ್ಸ್‌ಗೆ 20 ರೂ. ಹಾಗೂ ಡಬ್ಬಲ್ಸ್‌ಗೆ 30 ರೂ.ಗಳಂತೆ ತಾರೀಖು 23-11-87ರ ಒಳಗೆ ಕಾರ್ಯದರ್ಶಿ, ಪೋಲೀಸ್ ಷಟಲ್ ಬ್ಯಾಡ್ಮಿಂಟನ್ ಕ್ಲಬ್, ಬಾರ್ ಲೈನ್ ಚಿಕ್ಕಮಗಳೂರು ಇವರಿಗೆ ಸ್ಪರ್ಧಿಗಳ ಪ್ರವೇಶ ಪತ್ರಗಳನ್ನು ಕಳುಹಿಸಲು ಕೋರಲಾಗಿದೆ.

ಮಲೆನಾಡನ್ನು ತಲ್ಲಣಗೊಳಿಸಿದ ದರೋಡೆ ಪ್ರಕರಣ

ವೃದ್ಧ ದಂಪತಿಗಳ ಹತ್ಯೆ — ಮಗನ ಶಾಮೀಲು?

(ನಮ್ಮ ಪ್ರತಿನಿಧಿಯಿಂದ)

ಕೊಪ್ಪ: ವೃದ್ಧರೊಬ್ಬರನ್ನು ಕೊಂದು ಅವರ ಪತ್ನಿಯನ್ನು ತೀವ್ರವಾಗಿ ಹೊಡೆದು ಗಾಯಗೊಳಿಸಿ ಹಣ-ಆಭರಣ ದೋಚಿರುವ ಭೀಕರ ದರೋಡೆ ಪ್ರಕರಣವೊಂದು ಶಾನುವಳ್ಳಿಗೆ ಸಮೀಪದಲ್ಲಿ ನ. 10-11ರ ಮಧ್ಯ ರಾತ್ರಿ ವೇಳೆ ನಡೆದಿದೆ.

ನಿಲುವಾಗಿಲು ಮಂಡಲ ಪಂಚಾಯಿತ್ತಿಗೆ ಸೇರಿದ ಕೋಡೂರು ಗ್ರಾಮದ ಬಿಳುವಿನಕೊಡಿಗೆಯ ರಾಮಕೃಷ್ಣಯ್ಯ (79) ಕೊಲೆಗೀಡಾದ ವ್ಯಕ್ತಿ. ತಲೆಗೆ ಹೊಡೆತ ಬಿದ್ದಿದ್ದ ಅವರ ಪತ್ನಿ ಪಾರ್ವತಮ್ಮ (63) ಮರುದಿನ ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು.

ಅವರ ಒಬ್ಬನೇ ಮಗ ಸತ್ಯನಾರಾಯಣ (23) ತೀವ್ರ ಮಾನಸಿಕ ಆಘಾತಕ್ಕೀಡಾದಂತೆ ಕಾಣುತ್ತಿದ್ದು ಅಥವಾ ಆ ರೀತಿ ನಟಿಸುತ್ತಿದ್ದು, ಪೋಲೀಸರು ಅವನನ್ನು ಪ್ರಶ್ನಿಸುತ್ತಿದ್ದಾರೆ. ಈ ಪ್ರಕರಣದಲ್ಲಿ ಅವನು ಶಾಮೀಲಾಗಿರುವ ಶಂಕೆ ಬಲವಾಗಿದೆ.

ಕೊಲೆಗಾರರ ಬಗ್ಗೆ ಆತ ಸುಳಿವು ಮತ್ತು ವಿಳಾಸಗಳನ್ನು ನೀಡಿದ್ದು, ಪೋಲೀಸರು ತೀವ್ರ ಹುಡುಕಾಟ ನಡೆಸಿದ್ದಾರೆ. 9 ಸಾವಿರ ರೂ. ನಗದು ಹಾಗೂ 2 ಚಿನ್ನದ ಸರ ಕಳುವಾಗಿರುವುದಾಗಿ ಸತ್ಯನಾರಾಯಣ ಪೋಲೀಸರಿಗೆ ತಿಳಿಸಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ ಎಸ್ಪಿ ಓಂ ಪ್ರಕಾಶ್ ನ.12 ರಂದು ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರಿಗೆ ಧೈರ್ಯ ಹೇಳಿದ್ದಾರೆ.

(3ನೇ ಪುಟಕ್ಕೆ)

'ಅಕ್ಟೋಬರ್ ಕ್ರಾಂತಿ'ಯ ನೆನಪಿನಲ್ಲಿ ಶ್ರಮದಾನ

ನರಸಿಂಹರಾಜಪುರ: ಪ್ರಪ್ರಥಮ ಕಮ್ಯೂನಿಸ್ಟ ಕ್ರಾಂತಿಯಾದ 'ಅಕ್ಟೋಬರ್ ಕ್ರಾಂತಿ'ಯ (ರಷ್ಯ) ನೆನಪಿನ ದಿನಾಚರಣೆ ಅಂಗವಾಗಿ ಇಲ್ಲಿಗೆ ಸಮೀಪದ ಬಿ.ಎಚ್. ಕೈಮರದಲ್ಲಿ ಸಿ.ಪಿ.ಐ. ನೇತೃತ್ವದಲ್ಲಿ ಶ್ರಮದಾನದಿಂದ ಶಾಲಾ ಕ್ರೀಡಾಂಗಣ ನಿರ್ಮಿಸಿದರು. ಮಾಗ ಚಂದ್ರಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ಕಾರ್ಯಕ್ರಮವನ್ನು ಶ್ಲಾಘಿಸಿದರು. ಸಮಾರು 100 ಜನ ಶ್ರಮದಾನದಲ್ಲಿ ಭಾಗವಹಿಸಿದ್ದರು.

(ವರದಿ : ಚಿಕ್ಕೇಗೌಡ)

ಶೃಂಗೇರಿ ಜೇಸಿಗೆ ಪ್ರಶಸ್ತಿ

ಶೃಂಗೇರಿ : ಈಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಜೇಸೀಸ್ ಸಮ್ಮೇಳನದಲ್ಲಿ ಶೃಂಗೇರಿ ಜೇಸೀಸ್‌ಗೆ 13 ಪ್ರಶಸ್ತಿಗಳು ದೊರೆತಿವೆ. ಈ ಘಟಕದ ಸ್ಥಾಪಕ ಅಧ್ಯಕ್ಷ ಎಂ. ಜಿ. ಸೋಮಶೇಖರ್ ಅವರಿಗೆ ರಾಜ್ಯದ 'ಅತ್ಯುತ್ತಮ ಜೇಸೀ ಉಪಾಧ್ಯಕ್ಷ' ಹಾಗೂ ಹೆನ್ರಿ ಗಿಸನ್‌ಬಿಯರ್ ಫೆಲೋಶಿಪ್ ನೀಡಿ ಗೌರವಿಸಲಾಯಿತು. ಯು. ಎಸ್. ವಿಠಾಲ್, ಜಿ. ಎಂ. ಭಟ್, ಎಸ್. ಪಾಂಡುರಂಗ ಮತ್ತು ಸೋಮಶೇಖರ್‌ಗೆ ಉತ್ತಮ ತರಬೇತಿ ನೀಡಿದ್ದಕ್ಕಾಗಿ ಜೇಸಿ ಪಿನ್‌ಗಳನ್ನು ನೀಡಲಾಯಿತು.

ದಲಿತ ಸಂಘರ್ಷ ಸಮಿತಿ ನೂತನ ಪದಾಧಿಕಾರಿಗಳು

ಕೊಪ್ಪ : ದಲಿತ ಸಂಘರ್ಷ ಸಮಿತಿಯ ಕೊಪ್ಪ ತಾ॥ ಘಟಕದ ಸಭೆ ನ. 15ರಂದು ಇಲ್ಲಿ ನಡೆದು ಈಚೆಗೆ ತಾ॥ನಲ್ಲಿ ದಲಿತರು ಎದುರಿಸುತ್ತಿರುವ ಹಲವು ಸಮಸ್ಯೆಗಳ ಬಗ್ಗೆ ಹಾಗೂ ಅವುಗಳ ಪರಿಹಾರದ ಬಗ್ಗೆ ಚರ್ಚಿಸಲಾಯಿತು. ಜಿಲ್ಲಾ ಸಮಿತಿಯಿಂದ ಸಂಚಾಲಕ ಆರ್. ಕಲ್ಲಯ್ಯ, ರಾಧಾಕೃಷ್ಣ, ಭದ್ರಯ್ಯ. ಬಸವರಾಜು ಮುಂತಾದವರು ಭಾಗವಹಿಸಿದ್ದರು,

ತಮ್ಮಡವಳ್ಳಿಯ ಮಂಜಪ್ಪ ನೂತನ ತಾ॥ ಸಂಚಾಲಕರಾಗಿಯೂ ಕೊಪ್ಪದ ಶಿವಣ್ಣ ಖಜಾಂಚಿಯಾಗಿಯೂ ಇರುವ ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು.

ಬೀಳ್ಕೊಡಿಗೆ ಸಮಾರಂಭ

ಮೇಲುಬೆಳ್ರೆ: ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ 8 ವರ್ಷಗಳಿಂದ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, ಇದೀಗ ಬಸರೀಕಟ್ಟೆ ಶಾಲೆಗೆ ವರ್ಗವಾಗಿರುವ ಬಿ. ರುದ್ರಪ್ಪನವರಿಗೆ ಆತ್ಮೀಯ ಬೀಳ್ಕೊಡಿಗೆ ಸಮಾರಂಭ ಈಚೆಗೆ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಮಂಡಲ ಸದಸ್ಯ ಡಿ.ವಿ. ಶ್ರೀನಿವಾಸನಾಯ್ಕರು ರುದ್ರಪ್ಪನವರ ಸೇವಾ ಮನೋಭಾವ ಮತ್ತು ಕರ್ತವ್ಯ ನಿಷ್ಠೆಗಳ ಪ್ರಶಂಸೆ ಮಾಡಿ, ಇವರ ಕಾಲದಲ್ಲಿ ಬಿಡುವಿನ ವೇಳೆಯಲ್ಲಿ ಮಕ್ಕಳೊಂದಿಗೆ ಶ್ರಮದಾನದ ಮೂಲಕ ಉತ್ತಮವಾದ ಆಟದ ಮೈದಾನ ಮುಂತಾದ ಅನೇಕ ಒಳ್ಳೆಯ ಕಾರ್ಯಮಾಡಿ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿರುವುದನ್ನು ಸ್ಮರಿಸಿದರು.

ಇವರಿಗೆ ನೆನಪಿನ ಕಾಣಿಕೆಯನ್ನು ಶಾಲಾಭಿವೃದ್ಧಿ ಸಮಿತಿ ಸದಸ್ಯರಾದ ಡಿ. ವಿ. ಹನುಮಂತನಾಯ್ಕರು ನೀಡಿ ಗೌರವಿಸಿದರು. ಶಾಲಾ ಮಕ್ಕಳೂ ನೆನಪಿನ ಕಾಣಿಕೆಗಳನ್ನು ನೀಡಿದರು.

ಶಾಲೆಯ ನೂತನ ಮುಖ್ಯ ಶಿಕ್ಷಕರಾದ ರಾಮಚಂದ್ರ ಭಟ್ಟ ವಂದಿಸಿದರು.

(ವರದಿ: ಮೇಲುಬೆಳ್ರೆ ಮಂಜುನಾಥ್)

ಕೊಪ್ಪ ಮಾರ್ಕೆಟ್ : ಸುಗ್ಗಿಯ ಮೊದಲ ವ್ಯಾಪಾರ

15-11-1987

ಹಸ 3200-4636

ಬೆಟ್ಟೆ 1800-2539

ಗೊರಬಲು 800-1150

ಮುಂದಿನ ವ್ಯಾಪಾರ ತಾ॥ 29.11.87 ರಂದು ನಡೆಯುವುದು.

ಶಂಕರ್ ಕಾರ್ಮಿಕ ಸಂಘ ನವೆಂಬರ್ 86ರಲ್ಲಿ ಸಲ್ಲಿಸಿದ್ದ 'ಡಿಮ್ಯಾಂಡ್ ಚಾರ್ಟರ್' ಬಗ್ಗೆ ಮಾತುಕತೆ

ಕೊಪ್ಪ : ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರ **ಸಂಘ ನವೆಂಬರ್ 86 ರಲ್ಲಿ** ಸಲ್ಲಿಸಿದ್ದ ಬೇಡಿಕೆಗಳ ಪಟ್ಟಿಯಲ್ಲಿನ ಬೇಡಿಕೆಗಳ ಬಗ್ಗೆ ಮೊದಲ ಸುತ್ತಿನ ಮಾತುಕತೆ ನ. 13 ರಂದು ನಡೆಯಿತು.

ವರ್ಷಕ್ಕೆ ಒಟ್ಟಾರೆ 1ಲಕ್ಷ 10 ಸಾವಿರ ರೂ.ಗಳಷ್ಟು ಹೆಚ್ಚುವರಿ ವೆಚ್ಚವನ್ನು ಭರಿಸಲು ಮಾತ್ರ ಕಂಪೆನಿ ಸಿದ್ಧವಿರುವುದಾಗಿ, ಕಂಪೆನಿಯ ಪರವಾಗಿ ಭಾಗವಹಿಸಿದ್ದ ಮುಖ್ಯ ಆಡಳಿತ ವ್ಯವಸ್ಥಾಪಕ ನಂಜುಂಡಯ್ಯ ತಿಳಿಸಿದರು.

ಸುಮಾರು 350 ರಷ್ಟಿರುವ ಕಾರ್ಮಿಕರಿಗೆ ಕೇವಲ ತಿಂಗಳಿಗೆ 25ರೂ.ಗಳಷ್ಟು ಮಾತ್ರ ಪ್ರಯೋಜನವಾಗುವ ಈ ಕೊಡುಗೆಯನ್ನು ಕಾರ್ಮಿಕರು **ತಿರಸ್ಕರಿಸಿ**, ಕನಿಷ್ಠ ತಿಂಗಳಿಗೆ 120-130 ರೂ. ನಿವ್ವಳ ಹೆಚ್ಚುವರಿ ಬೇಕೆಂಬ ತಮ್ಮ ನಿರೀಕ್ಷೆಯನ್ನು ಮುಂದಿಟ್ಟರು.

ಹಣಕಾಸಿನ ಪರಿಣಾಮ ಇರುವ ಅಥವಾ ಇಲ್ಲದಿರುವ (ಸಣ್ಣ-ದೊಡ್ಡ) ಒಟ್ಟು ಸುಮಾರು 30ರಷ್ಟಿರುವ ಉಳಿದೆಲ್ಲ ಬೇಡಿಕೆಗಳ ಬಗ್ಗೆಯೂ ಚರ್ಚೆ ನಡೆದು ಕೆಲವನ್ನು ಒಪ್ಪುವಿಕೆ, ಕೆಲವನ್ನು ತಿರಸ್ಕರಿಸುವಿಕೆ ನಡೆಯಿತು. ಸದ್ಯದಲ್ಲಿಯೇ ಪುನಃ ಮಾತುಕತೆ ಮುಂದುವರಿಯಲಿದೆ ಎಂದು ತಿಳಿದು ಬಂದಿದೆ.

ಕಾರ್ಮಿಕ ಸಂಘದ ವತಿಯಿಂದ ಪ್ರ. ಕಾರ್ಯದರ್ಶಿ ರೇಣುಕಾರಾಧ್ಯ, ಉಪಾಧ್ಯಕ್ಷ ಬಿ. ಟಿ. ಚಂದ್ರಶೇಖರ್, ಕಾರ್ಯದರ್ಶಿ ಸಂಜೀವ ಮತ್ತು ಎಸ್. ಆರ್. ರಾಮಚಂದ್ರ ಭಾಗವಹಿಸಿದ್ದರು. ಮಾಲೀಕರ 'ಚನುಚಾ' ಸಂಘದಿಂದ ಎ. ಬಿ. ವಾಸಪ್ಪ, ಕೆ. ವಿ. ಮಂಜುನಾಥ ಶೆಟ್ಟಿ ಮತ್ತು ಬಿ.ಎಸ್. ಜಿ. ಕೆ. ಆಚಾರ್ "ಮಾತುಕತೆಗೆ" ಬಂದಿದ್ದರೆಂದು ಕಾರ್ಮಿಕರು ತಿಳಿಸಿದ್ದಾರೆ

ಕಾಫಿ ಸಂ॥ ಕೇಂದ್ರದ ಅಧಿಕಾರಿಯ ಕೊಲೆಗೈದ ವಿದ್ಯಾರ್ಥಿಯ ಬಂಧನ

ಬಾಳೆಹೊನ್ನೂರು : ಇಲ್ಲಿನ **ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆಯ ತರಬೇತಿ ಅಧಿಕಾರಿ ಸುಬ್ರಹ್ಮಣ್ಯಂ ಎಂಬವರನ್ನು ತರಬೇತಿ ವಿದ್ಯಾರ್ಥಿ ಅಸ್ಸಾಂನ ದೇವಜ್ಯೋತಿ ಬರೂವ ಎಂಬಾತ ನ.9ರ ರಾತ್ರಿ ಅವರ ಮನೆಯಲ್ಲಿ ಇರಿದು ಕೊಲೆಗೈದಿದ್ದಾನೆ.**

ಅನಂತರ ಲಾರಿಯಲ್ಲಿ ಪಲಾಯನ ಮಾಡಲು ಯತ್ನಿಸುತ್ತಿದ್ದ ಅವನನ್ನು ಇಲ್ಲಿನ ಠಾಣಾಧಿಕಾರಿ ಮತ್ತು ಸಿಬ್ಬಂದಿ ಬಂಧಿಸಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ದಕ್ಷ ಅಧಿಕಾರಿ ಎನ್ನಿಸಿದ್ದ ಸುಬ್ರಮಣ್ಯಂ ಈತನ ದುರ್ವರ್ತನೆಯ ಬಗ್ಗೆ [illegible] ಹೇಳಿದ್ದೇ ಕೊಲೆಗೆ ಕಾರಣವೆನ್ನಲಾಗಿದೆ. [illegible] ಬರುವಾನ ತಂದೆ ಮತ್ತು [illegible] ಹಾಗೂ ಅಸ್ಸಾಂನ [illegible] ಅಧಿಕಾರಿಗಳಿಗೆ [illegible] ಲಾಗಿದೆ.

ಸಾಲ ಮೇಳದ ಉದ್ದೇಶ ಈಡೇರಿಕೆ ಎಂತು?

—ಕೆಲವು ಅನ್ನಿಸಿಕೆಗಳು ಮತ್ತು ಸಲಹೆಗಳು

ಪ್ರಿಯರೆ,

ತಮ್ಮ ನ. 1ರ ಸಂಚಿಕೆಯಲ್ಲಿ ಸಾಲ ಮೇಳದ ಬಗ್ಗೆ ಶ್ರೀ ಸೇರಿಗಾರ್‌ರವರ ಲೇಖನ ಓದಿದೆ. 'ಸಾಲ ಮೇಳ' ಪ್ರಾರಂಭದಿಂದಲೂ ಸಾಕಷ್ಟು ವಾದ ವಿವಾದಗಳಿಗೆ ಈಡಾಗಿದ್ದರೂ, ಅವ್ಯಾಹತವಾಗಿ ಯಶಸ್ವಿಯಾಗಿ ಸಾಗುತ್ತಾ ಬಂದಿವೆ. ಸಾಲ ಮೇಳದ ಉದ್ದೇಶವೂ ಮೆಚ್ಚತಕ್ಕದ್ದೇ. ಆದರೆ ಅದರ ಉದ್ದೇಶ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಯಾವ ಪೂರ್ವಾಗ್ರಹವಿಲ್ಲದೆ ಯೋಚಿಸುವ ಅಗತ್ಯವಿದೆ. ಏಕೆಂದರೆ ಯಾವುದೇ ಒಳ್ಳೆಯ ಉದ್ದೇಶ ಈಡೇರಬೇಕಾದರೆ, ದೋಷವಿಲ್ಲದಂತೆ ಕೆಲಸ ನಿರ್ವಹಿಸಬೇಕಾದ್ದು ಮುಖ್ಯ.

ಈ ಮೇಳಗಳನ್ನು ಏಕಪಕ್ಷೀಯವಾಗಿ ವಿಪರೀತ ಪ್ರಶಂಸಿಸುವುದಾಗಲಿ–ವಿಪರೀತ ಟೀಕಿಸುವುದಾಗಲೀ ಸರಿ ಕಾಣುವುದಿಲ್ಲ. ಸಾಲ ಮೇಳಗಳ ಟೀಕೆಯನ್ನು ಕೇವಲ ಬ್ಯಾಂಕಿನವರೇ ಮಾಡುತ್ತಿಲ್ಲ ಅನ್ನುವುದನ್ನೂ ಗಮನಿಸಬೇಕು. ಯಾವುದೇ ವಿಷಯದ ಬಗ್ಗೆ ಯಾವ ಪೂರ್ವಾಗ್ರಹವೂ ಇಲ್ಲದೆ ಚಿಂತಿಸುವ, ಚರ್ಚಿಸುವ ಜನ ವಿರಳವಾಗುತ್ತಿದ್ದಾರೆ ಯಾವ ವಿಷಯದ ಬಗ್ಗೆಯೂ ವಸ್ತುನಿಷ್ಠವಾದ ಚರ್ಚೆ ಸಾಧ್ಯವಾಗದಂತೆ ರಾಜಕೀಯ, ಜಾತಿ, ಇತ್ಯಾದಿಗಳು ಎಲ್ಲೆಡೆ ತಲೆ ಹಾಕಿ ಚಿಂತನೆಗೆ ಅವಕಾಶ ಇಲ್ಲದಂತೆ ಮಾಡುವುದರ ಜೊತೆಗೆ 'ವ್ಯವಸ್ಥೆ'ಯನ್ನೂ ಹಾಳು ಮಾಡುತ್ತಿವೆ.

ಪೂಜಾರಿಯವರು ಆಡುವ ಮಾತುಗಳು 'ನಾಟಕೀಯ' ಅನ್ನಿಸಿದರೂ ಹುರುಳಿಲ್ಲದವಲ್ಲ. ಅವರಲ್ಲಿ ನಿಜಕ್ಕೂ 'ಬಡತನ'ದ ಬಗ್ಗೆ ನೈಜ ಕಳಕಳಿ ಇದ್ದೀತು. ಆದರೆ ಈ ಮೇಳದ ದುರುಪಯೋಗ ಪಡೆಯುವ ಮಂದಿಯೂ ಬಹಳ ಇದ್ದಾರೆ. 'ಮೇಳ'ಕ್ಕೆ ಮೆರವಣಿಗೆ–ಪಟಾಕಿಗಳ ಅಗತ್ಯ ಏನು ? ಇನ್ನು ರಾಜಕೀಯ ಲಾಭಕ್ಕೆ 'ಮೇಳ'ಗಳ ದುರುಪಯೋಗದ ಬಗ್ಗೆ ಸಾಕಷ್ಟು ಜನ ಆಡಿದ್ದಾರೆ. ಪೂಜಾರಿಯವರ ಶಿಸ್ತು, ಚೊಕ್ಕತನ ಹಳ್ಳಿಹಳ್ಳಿಯ ಧುರೀಣರಿಗಿದೆಯಾ ? ಇವರೆಲ್ಲ 'ಮೇಳ'ವನ್ನು ಸಂಪೂರ್ಣ ತಮ್ಮ ವೈಯಕ್ತಿಕ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ– ಪ್ರಾಮಾಣಿಕವಾದ ಕಳಕಳಿ ಇಲ್ಲದ ಜನ ಎನ್ನುವ ಆರೋಪದಲ್ಲಿ ಬಹಳಷ್ಟು ಸತ್ಯ ಇದೆ ಅನ್ನಿಸುತ್ತದೆ.

ಬ್ಯಾಂಕಿನ ನೌಕರರಿಗೆ – ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪೂಜಾರಿಯವರ ಟೀಕೆಯಲ್ಲಿ ಸಾಕಷ್ಟು ಸತ್ಯವಿದ್ದರೂ ಅದು 'ಅತಿ'ಯಾಗುತ್ತಿಲ್ಲವೆ ? ಸಾರ್ವಜನಿಕ ಭಾಷಣ ಮಾಡುತ್ತಿರುವಾಗ ವೇದಿಕೆಯ ಮೇಲೆ ಯಾವುದೇ ಬ್ಯಾಂಕಿನ ಅಧಿಕಾರಿಯನ್ನು ಕರೆದು 'ಅವಮಾನ' ಪಡಿಸುವುದು ಸರಿಯೆ? ಏಕೆಂದರೆ ಆ ಅಧಿಕಾರಿಯೂ ತನ್ನ ಬದುಕಿಗೆ ಬ್ಯಾಂಕನ್ನು ಅವಲಂಬಿಸಿ ದುಡಿಯುವ ಒಬ್ಬ ವ್ಯಕ್ತಿ. ಆತ ತಪ್ಪು ಮಾಡಿದ್ದಲ್ಲಿ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಅಥವಾ ವಿಚಾರಿಸಲು ಬೇರೆ ಮಾರ್ಗಗಳಿವೆ. ಬದಲಾಗಿ ಹೀಗೆ ಅವಮಾನಿಸುವುದರಿಂದ ದುಷ್ಪರಿಣಾಮವೇ ಹೆಚ್ಚು.

ಬ್ಯಾಂಕ್ ಒಂದು ವ್ಯವಸ್ಥೆ. ಮೊದಲಿಗೆ ಲಾಭ ಪ್ರದತೆಯ ದೃಷ್ಟಿಯಿಂದ ಬ್ಯಾಂಕುಗಳು ಕೆಲಸ ನಿರ್ವಹಿಸುತ್ತಿದ್ದವು ಈಗ ಲಾಭಪ್ರದತೆಯೊಂದೇ ಗುರಿಯಲ್ಲ, ಬದಲಾಗಿ ಸೇವಾ ದೃಷ್ಟಿಯಿಂದ ಬ್ಯಾಂಕುಗಳು ಕೆಲಸ ನಿರ್ವಹಿಸಬೇಕಾಗಿದೆ. ಜೊತೆಗೆ ಸುಭದ್ರತೆಯನ್ನೂ ಕಾಯ್ದುಕೊಳ್ಳಬೇಕು. ಸಮಾಜದ ಪ್ರಗತಿಗೋಸ್ಕರ, ರಾಷ್ಟ್ರೀಕರಣದ ನಂತರ ಈ ದಿಕ್ಕಿನಲ್ಲಿ ಮಹತ್ವದ ಬದಲಾವಣೆಗಳಾಗಿವೆ. (ಬ್ಯಾಂಕಿನ ಸಿಬ್ಬಂದಿಗಳು ಬಹುತೇಕ ಮೇಲ್ವರ್ಗದ ಜನಗಳಾಗಿರುವುದರಿಂದ ಸೇವಾದೃಷ್ಟಿಯಲ್ಲಿ ಪ್ರಗತಿ ಕುಂಠಿತಗೊಂಡಿರುವ ಸಾಧ್ಯತೆ ಇದೆ ಮತ್ತು ಹೆಚ್ಚಾಗಿ ಇಂತಹವರೇ 'ಸಾಲ ಮೇಳ'ವನ್ನು ವಿಪರೀತ ವ್ಯಂಗ್ಯವಾಗಿ ಟೀಕಿಸುವುದು.)

ಆದರೆ ಬ್ಯಾಂಕಿನಲ್ಲಿ ದುಡಿಯುವ ಅರ್ಥಾತ್ ಜನರೊಂದಿಗೆ ಮುಖಾಮುಖಿಯಾಗುವ ಸಾಮಾನ್ಯ ಅಧಿಕಾರಿಗಳು, ನೌಕರರು ಈ ಎಲ್ಲ ಸಾಲಗಳ ವಾಪಸಿಗೆ ನೇರ ಬಾಧ್ಯಸ್ಥರಾಗಿರುತ್ತಾರೆ. ಉನ್ನತ ಅಧಿಕಾರಿಗಳು ಏನಿದ್ದರೂ ಮೇಲಿನಿಂದ ಆಜ್ಞೆ ಮಾಡುತ್ತಾರೆ. (ಕೆಲವೊಮ್ಮೆ ಕೇವಲ ದೂರವಾಣಿಯ ಮುಖಾಂತರ ಆಜ್ಞೆ ಮಾಡುವವರೂ ಇದ್ದಾರೆ!) ಆದರೆ, ಬ್ಯಾಂಕಿನ ಅಧಿಕಾರಿ ವರ್ಗ 'ಸಾಲ ಮೇಳ'ದಿಂದಾಗಿ ಬರುವ ನೂರಾರು ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸುವುದಕ್ಕೆ ಸಾಕಷ್ಟು ಸಮಯವಾದರೂ ಇದೆಯೇ ? ಅಥವಾ ಸ್ವಂತ ನಿರ್ಧಾರ ತೆಗೆದುಕೊಳ್ಳಬಹುದಾದ ಸ್ವಾತಂತ್ರ್ಯವಾದರೂ ಇದೆಯೆ? ರಾಜಕೀಯ ವರಸೆ ಇಂಥ ಕಾರ್ಯಕ್ರಮಗಳಲ್ಲಿ ತಲೆ ಹಾಕುತ್ತಿದೆ. ಬ್ಯಾಂಕಿಂಗ್ ವ್ಯವಸ್ಥೆ ಈ ರಾಜಕೀಯದಿಂದ ದೂರ ಇರುವಂತೆ ನೋಡಿಕೊಳ್ಳಬೇಕು. ಸಾಧ್ಯವೆ?

ಸಾಲ ಮೇಳದಿಂದ ಬಡ ಜನತೆಗೆ ಖಂಡಿತ ಒಳ್ಳೆಯದಾಗುತ್ತಿದೆ. ಆದರೆ ಪೂರ್ಣವಾಗಿ ಅಲ್ಲ. ಮಧ್ಯವರ್ತಿಗಳು ಇದರಿಂದ ಸಾಕಷ್ಟು ಲಾಭ ಗಳಿಸುತ್ತಾರೆಂಬ ವದಂತಿ ಇದೆ. ಎಲ್ಲಕ್ಕೂ ಮುಖ್ಯವಾಗಿ ನಮ್ಮ ಜನಗಳಿಗೆ ಹಣಕ್ಕಿಂತ ಮುಖ್ಯವಾದ ಅಗತ್ಯ ಬೇರೊಂದು ಇದೆ. ಅದು ಅರಿವು. ನಮ್ಮ

(3ನೇ ಪುಟಕ್ಕೆ)

ಹು. ವಾ. ಶ್ರೀ.

ಪೂಜಾರಿಯವರ ತೂಕ ತಪ್ಪಿದ ಟೀಕೆ: ಕೆಲ ಪ್ರಶ್ನೆಗಳು

ಮಾನ್ಯರೆ,

ಇತ್ತೀಚೆಗೆ ಜಿಲ್ಲೆಯಲ್ಲಿ ಎರಡು ದಿನ ಸಾಲ ಮೇಳ ಕಾರ್ಯಕ್ರಮ ನಡೆಸಿದ ವೇಳೆ ಜನಾರ್ದನ ಪೂಜಾರಿಯವರು ರಾಜ್ಯ ಸರ್ಕಾರದ ಬಗ್ಗೆ ಮಾಡಿರುವ ಹಲವು ಟೀಕೆಗಳ ಬಗ್ಗೆ: ಕೆಲವು ಪ್ರತಿಕ್ರಿಯೆಗಳನ್ನೂ ಪ್ರಶ್ನೆಗಳನ್ನೂ ಮುಂದಿಡುತ್ತಿದ್ದೇನೆ.

ರಾಮಕೃಷ್ಣ ಹೆಗ್ಗಡೆಯವರು ನಮ್ಮ ರಾಜ್ಯವನ್ನು ಆರ್ಥಿಕ ಪರಿಸ್ಥಿತಿಯಲ್ಲಿ ದೇಶದಲ್ಲಿ 23ನೇ ಸ್ಥಾನಕ್ಕೆ ತಂದಿದ್ದಾರೆ ಎಂದು ಅವರು ಟೀಕಿಸಿದ್ದಾರೆ. ಹಾಗಾದರೆ ಅವರ ಪಕ್ಷದ ಸರ್ಕಾರಗಳು ಅಧಿಕಾರದಲ್ಲಿರುವ ರಾಜ್ಯಗಳು ಎಷ್ಟನೆಯ ಸ್ಥಾನದಲ್ಲಿವೆ ? ಅಲ್ಲಿ ಏನೆಲ್ಲ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ ? ಎಂಬುದನ್ನೆಲ್ಲ ಪೂಜಾರಿಯವರು ಹೇಳಬಹುದಿತ್ತು. ನಮ್ಮ ಪಕ್ಷ ಜನತೆಗೆ ಭರವಸೆ ನೀಡಿದ್ದ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದು ಮತ್ತು ಸತತ 4 ವರ್ಷಗಳಿಂದ ಎದುರಿಸಿದ ಭೀಕರ ಬರಗಾಲ—ಇವುಗಳಿಂದ ರಾಜ್ಯ ತೀವ್ರ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿರುವುದು ನಿಜವಿರಬಹುದು. ಆದರೆ ಇವರ ಕಾಂಗ್ರೆಸ್ ಸರ್ಕಾರ 30-35 ವರ್ಷಗಳಲ್ಲಿ ಮಾಡಿರದಿದ್ದಷ್ಟು ಜನಹಿತ ಕಾರ್ಯಗಳನ್ನು ಕೇವಲ ಮೂರ್ನಾಲ್ಕು ವರ್ಷಗಳಲ್ಲಿ ನಾವು ಮಾಡಿದ್ದೇವೆ.

ಕಿಗ್ಗದಲ್ಲಿ ಮಾತಾಡುತ್ತ ಪೂಜಾರಿಯವರು, "ನಿಮ್ಮ ಮುಖ್ಯಮಂತ್ರಿಗಳು ಈ ಕಿಗ್ಗಕ್ಕೆ ಎಷ್ಟು ಬಾರಿ ಬಂದಿದ್ದಾರೆ?" ಎಂದರು.

ಮುಖ್ಯಮಂತ್ರಿಗಳು ಕಿಗ್ಗಕ್ಕೆ ಬರದಿದ್ದರೂ ಇಲ್ಲಿನ ಯಾವ ಅಭಿವೃದ್ಧಿ ಕಾರ್ಯಕ್ರಮಗಳೂ ಹಿಂದೆ ಬಿದ್ದಿಲ್ಲ. ಮೊದಲೇ ಬರೆದಂತೆ ಇವರ 35 ವರ್ಷದ ಆಡಳಿತದಲ್ಲಿ ಆಗಿರದಷ್ಟು ಪ್ರಗತಿ ಕಾರ್ಯಗಳು ಈ ಗ್ರಾಮದಲ್ಲಿ 5 ವರ್ಷದಲ್ಲಿ ಆಗಿವೆ. ಮುಖ್ಯಮಂತ್ರಿಗಳು ಬಂದಿದ್ದಾರೋ ಇಲ್ಲವೋ ಎಂಬುದೇ ಮುಖ್ಯವಲ್ಲ.

ಪೂಜಾರಿಯವರು ಯಾವುದೋ ಒಂದು ಹಳ್ಳಿಗೆ ಹೋಗಿ ಇಂಥ ಕ್ಷುಲ್ಲಕ ಪ್ರಶ್ನೆಗಳಿಂದ ಜನರ ಮನಸ್ಸನ್ನು ಕಲುಷಿತಗೊಳಿಸಲು ಯತ್ನಿಸುವುದು ಭೂಷಣವಲ್ಲ. ಅವರು ಭೇಟಿ ಕೊಡದ ಇನ್ನೂ ಸಾವಿರಾರು–ಲಕ್ಷಾಂತರ ಹಳ್ಳಿಗಳು ರಾಜ್ಯದಲ್ಲೂ ದೇಶದಲ್ಲೂ ಇವೆ ಎಂಬುದನ್ನೂ ಅವರು ನೆನಪಿಡಲಿ.

ಇನ್ನು, ಇವರ ಸಭೆಯಲ್ಲಿ ಯಾರಾದರೂ ಬಡಜನರು ರಾಜ್ಯ ಸರ್ಕಾರದಿಂದ ಆಗಬೇಕಾದ ಯಾವುದಾದರೂ ಕೋರಿಕೆಯನ್ನು ಮುಂಡಿಸಿದರೆ ತಕ್ಷಣ, "ಅದು ರಾಜ್ಯ ಸರ್ಕಾರದ್ದು. ನೀವು ಜನತಾ ಪಕ್ಷವನ್ನು ಗೆಲ್ಲಿಸಿದ್ದೀರಿ. ಅವರನ್ನೇ ಕೇಳಿ" ಎಂದು ಹೇಳುತ್ತಾರೆ.

ಹಾಗಾದರೆ, ರಾಜ್ಯ ವಿಧಾನ ಸಭೆಯ ಪ್ರಬಲ ವಿರೋಧ ಪಕ್ಷವಾದ ಕಾಂಗ್ರೆಯಾಗಲಿ, ಅದರ ಅಧ್ಯಕ್ಷರಾದ ಇವರಾಗಲಿ, ಜನರ ಇಂಥ ಸಮಸ್ಯೆಯ ಬಗ್ಗೆ ಯಾವ ರೀತಿಯಲ್ಲೂ ಗಮನ ಕೊಡುವುದು ಸಾಧ್ಯವಿಲ್ಲವೆ ? ಅಂಥ ಜವಾಬ್ದಾರಿ ಕೂಡ ಅವರ ಮೇಲೆ ಇಲ್ಲವೆ ?

ಅಲ್ಲದೆ ಆ ಬಡ ವ್ಯಕ್ತಿ ಯಾವ ಪಕ್ಷಕ್ಕೆ ಓಟು ಕೊಟ್ಟವರೆಂದು ಇವರು ಹೇಗೆ ತೀರ್ಪು ಕೊಡುತ್ತಾರೆ? (ಅವರು ಇವರ ಪಕ್ಷಕ್ಕೆ ಓಟು ಕೊಟ್ಟವರೂ ಆಗಿರಬಹುದಲ್ಲ!) ಜನ ತಮಗೆ ಸರಿ ಎನ್ನಿಸಿದವರಿಗೆ ಓಟು ಕೊಡುವುದೂ ಈ ಪ್ರಜಾ ಪ್ರಭುತ್ವದಲ್ಲಿ ತಪ್ಪೆ ? ಕಾಂಗ್ರೆಸನ್ನು ಗೆಲ್ಲಿಸಿದಾಗ ಮಾತ್ರ ಇವರು ನೆರವಾಗುವುದೆಂದಾದಲ್ಲಿ ಜನರ ಬಗ್ಗೆ ಇವರ ಕಾಳಜಿ ಬರೀ ಓಟಿನ ಲೆಕ್ಕದ್ದು ಮಾತ್ರವೆ

(3ನೇ ಪುಟಕ್ಕೆ)

ಯಾವಾಗ ನೋಡಿದರೂ ಪೋಲೀಸ್ ಬಂದೋಬಸ್ತ್ :

ಎತ್ತ ಸಾಗುತ್ತಿದೆ ಈ ಜಯಪುರ ?

ಸುಮಾರು 30–40 ಜನ ಪೋಲೀಸರು, ಮೂವರು ಸಬ್‌ಇನ್‌ಸ್ಪೆಕ್ಟರುಗಳು, ಅವರ ನೇತೃತ್ವಕ್ಕೆ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರ್—ಹೀಗೆ ಸಕಲ ಪೋಲೀಸ್ ಬಲದೊಡನೆ ಚುನಾವಣೆ !

ಇದು ಈಚೆಗೆ ನಡೆದ ಕರಿಮನೆ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಚುನಾವಣೆಯ ದೃಶ್ಯ.

ಇತ್ತೀಚೆಗೆ ಇಂಥ ಪೋಲೀಸ್ ಬಲ, ನೀಲಿ ವ್ಯಾನ್—ಇತ್ಯಾದಿಯೆಲ್ಲ ಜಯಪುರಕ್ಕೆ ಮಾಮೂಲಾಗಿಬಿಟ್ಟಿವೆ. ಮೊನ್ನೆ ಜನಾರ್ದನ ಪೂಜಾರಿಯವರು, ಅದಕ್ಕೂ ಹಿಂದೆ ಸಚಿವ ಬಿ.ಎಲ್. ಶಂಕರ್ ಬಂದಾಗಲೂ ಹೀಗೇ. ಇದಕ್ಕೂ ಹಿಂದೆ ಚೌತಿ ಗಣಪನಿಗೂ ಪೋಲೀಸ್ ರಕ್ಷೆ ಸಿಕ್ಕಿತ್ತು. ಅದಕ್ಕೆ ಮುಂಚೆ ಮಂಡಲ ಚುನಾವಣೆಯಲ್ಲಂತೂ ಕೇಳುವುದೇ ಬೇಡ.

ಇದು ಯಾಕೆ ಹೀಗೆ ? ನಾವು ಎತ್ತ ಸಾಗುತ್ತಿದ್ದೇವೆ ? ನಮ್ಮ ಪ್ರಜಾಪ್ರಭುತ್ವ ಅರಾಜಕತೆಯತ್ತ ಸಾಗುತ್ತಿದೆಯೇ ? ಅಥವಾ ಈಗಿನ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ನಮಗೆ ಒಗ್ಗುತ್ತಿಲ್ಲವೆ ? ಅಥವಾ ಈಗಷ್ಟೇ ಪ್ರಜಾಪ್ರಭುತ್ವಕ್ಕೆ ಕಾಲಿಡುತ್ತಿದ್ದೇವೆಯೆ ? ಈ ಪ್ರಶ್ನೆಗಳಿಗೆಲ್ಲ ಕೆಲವು ವರ್ಷಗಳ ನಂತರ ಉತ್ತರ ಸಿಕ್ಕೀತು. ಆದರೆ ಊರಿನ ನೆಮ್ಮದಿ ಹಾಳು ಮಾಡುವ ಇಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳಬೇಕಾದದ್ದು ಊರಿನ ಗಣ್ಯ ನಾಗರಿಕರ, ಪ್ರಜಾ ಪ್ರತಿನಿಧಿಗಳ ಆದ್ಯ ಕರ್ತವ್ಯ. ಶಾಂತಿ, ಸಮಾಧಾನ, ಸಮೃದ್ಧಿಗೆ ಪ್ರಸಿದ್ಧಿಯಾದ ಮಲೆನಾಡು ಹಾಗೇ ಇರಲಿ ಎಂದು ಭಾವಿಸಿ ವರ್ತಿಸೋಣ ಅಲ್ಲವೆ ? •

—ಕೃಷ್ಣ ಭಂಡಾರಿ, ಜಯಪುರ.

ಮಲೆನಾಡನ್ನು ತಲ್ಲಣಗೊಳಿಸಿದ ಕೊಲೆ, ದರೋಡೆ

(1ನೇ ಪುಟದಿಂದ)

ಸನ್ನಿವೇಶ

ಕೊಪ್ಪ–ಆಗುಂಬೆ ರಸ್ತೆಯ ಮಾವಿನಕಟ್ಟೆಯಿಂದ ಕಮ್ಮರಡಿ ರಸ್ತೆಯಲ್ಲಿ ಸುಮಾರು 2 ಕಿ. ಮೀ. ದೂರದಲ್ಲಿ ಬಿಳುವಿನ ಕೊಡಿಗೆ ಇದೆ. ರಾಮಕೃಷ್ಣಯ್ಯನ ಮನೆ ಮುಖ್ಯ ರಸ್ತೆಯಿಂದ ಕೇವಲ ಅರ್ಧ ಫರ್ಲಾಂಗಿನೊಳಗಿದೆ. ಸುತ್ತಮುತ್ತ ಅರ್ಧ–ಒಂದು ಫರ್ಲಾಂಗಿನಲ್ಲಿ ಹತ್ತಾರು ಮನೆಗಳಿವೆ.

ರಾಮಕೃಷ್ಣಯ್ಯನಿಗೆ ಒಂದೂವರೆ ಎಕರೆ ತೋಟ, ಎರಡು ಎಕರೆ ಗದ್ದೆ ಇದೆ. ಬೇರೆ ಮಕ್ಕಳಿಲ್ಲ. ವಹಿವಾಟೆಲ್ಲ ತಂದೆಯ ಹೆಸರಿನಲ್ಲಾದರೂ ಮಗನೇ ಎಲ್ಲ ನೋಡಿಕೊಳ್ಳುವವನು. ಊಟ–ಬಟ್ಟೆಗೆ ಏನೂ ಕೊರತೆಯಿಲ್ಲದ ನೆಮ್ಮದಿ ಜೀವನಕ್ಕೆ ವಿಪುಲ ಅವಕಾಶ. ಮಗನಿಗೂ, ತಂದೆ – ತಾಯಿಗೂ ಸಂಬಂಧ ಮಧುರವಾಗಿಯೇ ಇತ್ತು— ಈಚಿನವರೆಗೂ.

ಒಡನಾಟ, ಚಟುವಟಿಕೆ ಶಂಕಾಸ್ಪದ

ಆದರೆ ಕಳೆದ ಒಂದೆರಡು ವರ್ಷಗಳಿಂದ ಸತ್ಯನಾರಾಯಣನ ಒಡನಾಟ ಅತೃಪ್ತಿಕರ. ನೆರೆಯ ಅಣ್ಣೇಗೌಡರ ಮಗ ಜಯರಾಮಯಾನೆ ಲೋಕೇಶ, ರವಿ ಎಂಬೊಬ್ಬ, ಕಮ್ಮರಡಿಯ ಬಟ್ಟೆ ವ್ಯಾಪಾರಿ ಕೃಷ್ಣಮೂರ್ತಿಯವರ ಮಗ ಶಶಿ — ಇವರೊಂದಿಗೆ ಇವನ ಸಖ್ಯ. ಶಶಿ ಅತ್ಯಂತ ಆಪ್ತ ಸ್ನೇಹಿತ. ಬೇರೆ ಇನ್ಯಾರೊಂದಿಗೂ ಇವನ ಒಡನಾಟ ಅಷ್ಟಕ್ಕಷ್ಟೆ.

ಇವರೆಲ್ಲರ ಚಟುವಟಿಕೆ ಶಂಕಾಸ್ಪದ. ಜಯರಾಮನ ಕೌಟುಂಬಿಕ ಹಿನ್ನೆಲೆಯಲ್ಲೂ ಕಳ್ಳ ನಾಟ ಸಾಗಣೆ ಇತ್ಯಾದಿ ತಪ್ಪು ವೃತ್ತಿಗಳ ಒಂದು ಸಣ್ಣ ಎಳೆ ಸಿಗುತ್ತದೆ. ಬೆಂಗಳೂರು, ಬೊಂಬಾಯಿ ಮುಂತಾಗಿ ಇವರುಗಳ ಓಡಾಟ. ಆದರೆ ಗ್ರಾಮಸ್ಥರಿಗೆ ಇವರ ವಹಿವಾಟು ಏನೆಂಬುದರ ಕಲ್ಪನೆಯಾಗಲಿ, ಸ್ಪಷ್ಟ ಚಿತ್ರವಾಗಲಿ ಇರಲಿಲ್ಲ.

'ಯೋಜನೆ', ಒತ್ತಡ

ಜಮೀನು ಮಾರಿ ಬೆಂಗಳೂರಿಗೆ ಹೋಗಿ ನೆಲೆಸುವುದು, ಬ್ರಾಂದಿ ಅಂಗಡಿ ಇಡುವುದು ಮುಂತಾದ ಇವನ ಈಚಿನ 'ಯೋಜನೆ'ಗಳನ್ನು ತಾಯ್ತಂದೆ ಕಟುವಾಗಿ ವಿರೋಧಿಸಿದ್ದರು. ಅಲ್ಲದೆ, ಈತ ಮದುವೆಯಾಗ ಬಯಸಿದ್ದ ಹುಡುಗಿ ಈತನಿಗೆ ಚಿಕ್ಕಪ್ಪನ ಮಗಳು – ಅಂದರೆ ತಂಗಿಯಾಗುತ್ತಾಳೆ ಎಂಬ ಕಾರಣದಿಂದ ಆ ಮದುವೆಯ ಯೋಚನೆಗೂ ಹಿರಿಯರ ಒಪ್ಪಿಗೆ ದೊರೆತಿರಲಿಲ್ಲ. ಇದಿಷ್ಟು ಒಂದು ಹಿನ್ನೆಲೆ.

ಇವರುಗಳ ವ್ಯವಹಾರ ಜಾಸ್ತಿಯಾದಂತೆ ಇತ್ತೀಚೆಗೆ ಜಯರಾಮ ದುಡ್ಡಿಗಾಗಿ ಇವನನ್ನು ಪೀಡಿಸುತ್ತಿದ್ದ; ನಿಮ್ಮ ತಂದೆಯ ಫಿಕ್ಸೆಡ್ ಡಿಪಾಜಿಟ್ ತೆಗೆಸಿಕೊಡು ಮುಂತಾದ ತಗಾದೆ ಒಡ್ಡಿದ್ದ; ಅವರು ಒಪ್ಪುವುದಿಲ್ಲನೆಂದಾಗ ಅವರ ವಿಚಾರ ನಮಗೆ ಬಿಡು ಎಂದು ಹೇಳಿದ್ದ ಮುಂತಾದ ವಿವರಗಳನ್ನು ಸತ್ಯನಾರಾಯಣ ಹೊರಗೆಡವಿದ್ದಾನೆ.

ಹಣ ಕೊಡದಿದ್ದರೆ ನಿನ್ನ ತಂದೆ–ತಾಯಿಗಳ ಕೊಲೆ ಮಾಡುತ್ತೇವೆ, ಈ ವಿಚಾರ ಯಾರಿಗಾದರೂ ತಿಳಿಸಿದರೆ ನಿನ್ನನ್ನೂ ಕೊಲೆ ಮಾಡುತ್ತೇವೆ ಎಂದೂ ತಿಳಿಸಿದ್ದ; ಘಟನೆ ನಡೆದ ದಿನ ರಾತ್ರಿ ಹಣ ತಂದು ಕೊಡದಿದ್ದಲ್ಲಿ ಕೊಲೆ ಮಾಡುವುದಾಗಿ ಬೆದರಿಸಿದ್ದ ಎಂತಲೂ ಸತ್ಯನಾರಾಯಣ ಹೇಳಿದ್ದಾನೆ.

ಹಲ್ಲೆ, ದರೋಡೆ

ಘಟನೆ ನಡೆದ ನ. 10ರ ರಾತ್ರಿ ಸುಮಾರು 12 ಗಂಟೆಗೆ ಅಡಿಕೆ ಸುಲಿತ ಮುಗಿಸಿ, ಎಂದಿನಂತೆಯೇ ಆಳುಗಳನ್ನು ಅವರ ಮನೆಗೆ ಬಿಟ್ಟು ಬರಲು ಸತ್ಯನಾರಾಯಣ ಹೋದ. ತಾಯಿ ನಿತ್ಯದಂತೆ ಅವನನ್ನು ಕಾದು ಜಗಲಿಯಲ್ಲಿ ಕೂತಿದ್ದರು. ಅಂದು ತಂದೆ ಹುಷಾರಿಲ್ಲದ್ದರಿಂದ ಸ್ವಲ್ಪ ಬೇಗ ಮಲಗಿದ್ದರು. ಈ ಸಮಯದಲ್ಲಿ ದುಷ್ಕರ್ಮಿಗಳು ಹಲ್ಲೆ ನಡೆಸಿ. ಬಹುಶಃ ಸಿಕ್ಕಿದ್ದನ್ನು ಬಾಚಿಕೊಂಡು ಓಡಿ ಹೋಗಿದ್ದಾರೆಂದು ತಿಳಿದು ಬರುತ್ತದೆ ಆದರೆ ಪಾರ್ವತಮ್ಮನವರ ಬಂಗಾರ ಸಹಿತವಾದ ಮಾಂಗಲ್ಯ ಹಾಗೇ ಇದೆ.

ಸತ್ಯನಾರಾಯಣ, "ಕಳ್ಳರು..... ದರೋಡೆಕೋರರು........" ಮುಂತಾಗಿ ಬೊಬ್ಬೆ ಹೊಡೆಯುತ್ತ ಓಡಿ ಬಂದಾಗ ಸುತ್ತಮುತ್ತಲವರೆಲ್ಲ ಬಂದು ಸೇರಿದರು. ಪಾರ್ವತಮ್ಮ ತಲೆಯೊಡೆದು ಜಗಲಿಯಲ್ಲಿ ಬಿದ್ದಿದ್ದರು. ಒಳಗೆ ರಾಮಕೃಷ್ಣಯ್ಯ ಮಲಗಿದ್ದಲ್ಲೇ ತಲೆ

(4ನೇ ಪುಟಕ್ಕೆ)

ಸ್ಥಾ ಸಂಘದ ಚುನಾವಣೆ
ಜನತಾ ಎಡವಟ್ಟು

(ನಮ್ಮ ಪ್ರತಿನಿಧಿಯಿಂದ)

ಹೇರೂರು: ಇಲ್ಲಿನ ವ್ಯ. ಸೇ. ಸ. ಸಂಘದಿಂದ ಕೊಪ್ಪ ತಾ. ವ್ಯ. ಮಾ. ಸ. ಸಂಘಕ್ಕೆ ಒಬ್ಬ ನಿರ್ದೇಶಕನ ಆಯ್ಕೆಗಾಗಿ ಈಚೆಗೆ ನಡೆದ ಚುನಾವಣೆಯಲ್ಲಿ ಜನತಾ ಪಕ್ಷಕ್ಕೆ ಎಡವಟ್ಟಾಗಿದೆ.

ಜನತಾ–ಕಾಂಗ್ರೆ ನಡುವೆ ಸಮಬಲ ಉಂಟಾಗಿತ್ತು. ಫಲಿತಾಂಶ ಜನತಾ–ಪರ ಆಗುವಂತೆ ಮಾಡಲು. ಖಾಲಿಯಿದ್ದ ಕೃಷಿ ಸಹಾಯಕರ ಹುದ್ದೆಗೆ (ಇವರು ಸರ್ಕಾರದ ನಾಮಿನಿಯಾಗಿ ಸಂಘಕ್ಕೆ ಒಬ್ಬ ನಿರ್ದೇಶಕರಾಗಿರುತ್ತಾರೆ) ಕಲ್ಕೆರೆಯ ಕೃ. ಸ.ರನ್ನು 'ಇನ್‌ಚಾರ್ಜ್' ಎಂದು ನೇಮಿಸಿ, ಅವರ ಮತದೊಡನೆ ಜನತಾ ಅಭ್ಯರ್ಥಿ ಆಯ್ಕೆಯಾದರು.

ಆದರೆ 'ರಾಷ್ಟ್ರೀಯ ಕೃಷಿ ಅಭಿವೃದ್ಧಿ ಕಾರ್ಯಕ್ರಮ'ದನ್ವಯ ಹೀಗೆ 'ಇನ್‌ಚಾರ್ಜ್' ನೇಮಕ ಮಾಡುವಂತಿಲ್ಲ, ಆದ್ದರಿಂದ ಕೃ. ಸ. ರ ಮತ ಅಸಿಂಧು ಎನ್ನಲಾಗಿದೆ. ಇದರ ವಿರುದ್ಧ ಸೂಕ್ತ ಕಾರ್ಯಾಚರಣೆಗೆ ಕಾಂಗ್ರೆ ವಲಯಗಳು ಆಲೋಚಿಸುತ್ತಿವೆ.

ರಾಜ ಕಾರಣಕ್ಕೆ ಕೃಷಿ ಇಲಾಖೆಯನ್ನು ಬಳಸಿಕೊಂಡ ಬಗ್ಗೆ ಶಾಸಕರು ಮತ್ತು ಜನತಾ ವರಿಷ್ಠರನ್ನು ಕಾಂಗ್ರೆ ಖಂಡಿಸಿದ್ದು, ಜನತಾ ಪಕ್ಷ ಈ ಎಡವಟ್ಟನ್ನು ಹೇಗೆ ನಿಭಾಯಿಸುವುದೋ, ಕಾದು ನೋಡಬೇಕು.

ತೂಕ ತಪ್ಪಿದ ಟೀಕೆ: ಕೆಲ ಪ್ರಶ್ನೆಗಳು

(2ನೇ ಪುಟದಿಂದ)

ಪೂಜಾರಿಯವರಂಥ ಅನುಭವಿ ರಾಜಕಾರಣಿ ತಾವು ಮಾತನಾಡುವ ಮೊದಲು ಸರಿಯಾಗಿ ಯೋಚಿಸಿ, ಗಾಂಭೀರ್ಯದ, ತೂಕದ ಮಾತನ್ನಾಡುವರೆಂದು ಜನ ನಿರೀಕ್ಷಿಸುತ್ತಾರೆಂದು ನನ್ನ ನಂಬಿಕೆ.

ಇನ್ನು, ಇವರ ಹಿಂಬಾಲಕರು, ಕಾರ್ಯಕರ್ತರು–ಸ್ವತಃ ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿಗಳಲ್ಲಿ ಅಧಿಕಾರ ಸ್ಥಾನಗಳಲ್ಲಿ ಭಾಗಿಗಳಾಗಿದ್ದೂ ಸಹ– "ಈ ವ್ಯವಸ್ಥೆ ಅಸ್ತಿತ್ವ ಕಳೆದುಕೊಳ್ಳುತ್ತದೆ, ಮೊದಲಿನ ವ್ಯವಸ್ಥೆಯೇ ಬರುತ್ತದೆ" ಮುಂತಾಗಿ ಅಪಪ್ರಚಾರದ ಮೂಲಕ ಜನಮನದಲ್ಲಿ ಗೊಂದಲವನ್ನೂ, ಸಮಾಜದಲ್ಲಿ ಅಭದ್ರತೆ–ಅರಾಜಕತೆಗಳನ್ನೂ ಉಂಟುಮಾಡಲು ಹವಣಿಸುತ್ತಿದ್ದಾರೆ.

ಇದು ಬಹಳ ಹೇಯ ಕೃತ್ಯ. ಜನತೆಗೆ ಉಪಯೋಗವಾಗುವ ಇಂಥದೊಂದು ಬೃಹತ್ ಕಾರ್ಯಕ್ರಮ ಅನುಷ್ಠಾನಕ್ಕೆ ಬರುವಾಗ ಆರ್ಥಿಕ ಅಡಚಣೆ (ಮೊದಲೇ ಮುಗ್ಗಟ್ಟು ಇರುವುದರಿಂದಲೂ), ಗೊಂದಲ ಉಂಟಾಗುವುದು ಸಹಜ. ಆದರೆ ಮುಖಂಡರುಗಳು ತಾವೂ ತಾಳ್ಮೆ ವಹಿಸಿ, ಜನತೆಗೂ ತಾಳ್ಮೆಯಿಂದ ಸಹಕರಿಸಲು ಹೇಳಬೇಕು ಹಾಗೂ ಇದ್ದಷ್ಟು ಸಂಪನ್ಮೂಲ ಮತ್ತು ಅವಕಾಶದಲ್ಲಿ ಆದಷ್ಟು ಜನರ ಕಷ್ಟ ನಿವಾರಣೆಗೆ ಯತ್ನಿಸಬೇಕು. ಅದು ಬಿಟ್ಟು ಕೇವಲ ತಮ್ಮ ರಾಜಕೀಯ ದುರ್ಲಾಭಕ್ಕಾಗಿ, ದೂರಾಲೋಚನೆಯಿಲ್ಲದೆ ಇಂಥ ವರ್ತನೆಯಲ್ಲಿ ತೊಡಗುವುದು ಸಮಾಜಘಾತಕತನ ಎನ್ನಿಸಿಕೊಳ್ಳುತ್ತದೆ.

ಪೂಜಾರಿಯವರು ಈ ಬಗ್ಗೆಯೂ ಗಮನ ಕೊಡುತ್ತಾರೆಂದು ಆಶಿಸುತ್ತೇನೆ.

—**ಎಚ್. ವಿ. ಶಿವಪ್ಪ,** ಉಪಾಧ್ಯಕ್ಷ,
ಶೃಂಗೇರಿ ತಾ॥ ಜನತಾ ಪಕ್ಷ.

ಸಾಲ ಮೇಳದ ಉದ್ದೇಶ ಈಡೇರಿಕೆ ಎಂತು?

(2ನೇ ಪುಟದಿಂದ)

ಮುಗ್ಧ ಜನ ತಾವು ತೆಗೆದುಕೊಂಡ ಹಣವನ್ನು ಹೇಗೆ ಲಾಭಪ್ರದವಾಗಿ ಬಳಸಬಹುದೆಂದು ಯೋಚಿಸಿ ಕಾರ್ಯತತ್ಪರವಾಗುವ ಮೊದಲೇ ಜೇಬು ಖಾಲಿ ಮಾಡಿಕೊಳ್ಳುವಂಥವರು (ಸರಿಯಾಗಿ ವಿನಿಯೋಗಿಸಿ ಮೇಲೆ ಬರುವವರೂ ಇಲ್ಲದಿಲ್ಲ.) ಆದ್ದರಿಂದ ಈ ದಿಕ್ಕಿನಲ್ಲಿ ಅವರಿಗೆ ಅರಿವು ಮೂಡಿಸುವ ಕಾರ್ಯ ಮೊದಲು ಆಗಬೇಕು.

ಜನರನ್ನು ದಾರಿದ್ರ್ಯ ರೇಖೆಯಿಂದ ಮೇಲೆತ್ತಲು–ಸಹಾಯ, ಸಾಲ ವಗೈರೆ ನೀಡಲು–ಮೇಳಕ್ಕಿಂತ ಉತ್ತಮ ಮಾರ್ಗ ಇಲ್ಲವೆ? ಇದಕ್ಕಿಂತ ವ್ಯವಸ್ಥಿತವಾದ ಕಾರ್ಯಕ್ರಮವೊಂದನ್ನು ರೂಪಿಸಲು ಸಾಧ್ಯವಿಲ್ಲವೆ? ಹಾಗೆ ಮಾಡದಿದ್ದರೆ ಹಣ ಒಬ್ಬರದು, ಕೊಡುವವರೊಬ್ಬರು, ಹೊಣೆ ಇನ್ನೊಬ್ಬರದು, ಪಡೆದವರು ಮಗದೊಬ್ಬರು — ಒಟ್ಟಿನಲ್ಲಿ 'ದರ್ಬಾರಿ' ಬ್ಯಾಂಕಿಂಗ್ ಆದೀತು. ಆದ್ದರಿಂದ ಇಂತಹ ಸದುದ್ದೇಶದ ಕಾರ್ಯಕ್ರಮವನ್ನು ಸರಿಯಾಗಿ ರೂಪಿಸಿ, ಬ್ಯಾಂಕು ಸಂಪೂರ್ಣ ಸ್ವತಂತ್ರವಾಗಿ ನಿರ್ವಹಿಸುವಂತೆ ವಹಿಸಿಕೊಡಬೇಕು. ರಾಜಕೀಯ ಪ್ರವೇಶಿಸಕೂಡದು (ಆದರಲ್ಲೂ ಕೇಂದ್ರದಲ್ಲೊಂದು–ರಾಜ್ಯದಲ್ಲೊಂದು ಸರಕಾರವಾದಾಗ ಈ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಪರಿಣಾಮ?)

ಈ ನಿಟ್ಟಿನಲ್ಲಿ ಬ್ಯಾಂಕಿನ ಎಲ್ಲ ಸಿಬ್ಬಂದಿಗಳಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು. ಸಾಲ ವಿತರಣೆ ಪ್ರಾಮಾಣಿಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಬಹುದು. ಈ ರೀತಿ ಯಾವುದೇ ವ್ಯವಸ್ಥಿತ ಮಾರ್ಗದಿಂದ ಉದ್ದೇಶ ಸಫಲವಾದೀತು ಎಂದು ನನ್ನ ಅನಿಸಿಕೆ. ಬದಲಾಗಿ ಒಮ್ಮೆಲೇ ಎಲ್ಲರನ್ನೂ ದಾರಿದ್ರ್ಯ ರೇಖೆಯಿಂದ ಮೇಲೆತ್ತಬೇಕೆಂದು ಸಾಮೂಹಿಕವಾಗಿ ವಿತರಿಸುವುದರಿಂದ ಸದ್ವಿನಿಯೋಗವೆಷ್ಟೋ? ದುರ್ವಿನಿಯೋಗವೆಷ್ಟೋ? ಮತ್ತು ಈ ಎಲ್ಲ ಅಬ್ಬರ–ಪ್ರಚಾರಗಳಿಂದ ದುರುಪಯೋಗ ಪಡೆಯುವವರೆಷ್ಟೋ?

ಕೊನೆಯಲ್ಲಿ ಒಂದು ಮಾತು. ಸಾಲ ಮೇಳದ ಬಗೆಗಿನ ಲೇಖನ ಬರೆದ ಟಿ. ನಾ. ಸೇರಿಗಾರ್‌ರವರ ಬಡವರ ಬಗೆಗಿನ ಪ್ರಾಮಾಣಿಕ ಕಳಕಳಿ ಅತ್ಯಂತ ಪ್ರಶಂಸನೀಯ.

—**ಹು. ನಾ. ಶ್ರೀಪ್ರಕಾಶ್**
ಬೀಳಗಿ, ಬಿಜಾಪುರ ಜಿಲ್ಲೆ.

ಕಿರಿಯ ಪೇಜಾವರ ಸ್ವಾಮಿಗಳ ಪೀಠ ತ್ಯಾಗ

ಉಡುಪಿ ಪೇಜಾವರ ಮಠದ ಕಿರಿಯ ಸ್ವಾಮಿಗಳಾದ ವಿಶ್ವ ವಿಜಯ ತೀರ್ಥರು ಪೀಠ ತ್ಯಾಗ ಮಾಡಿದ್ದಾರೆ.

ಇದೀಗ ನ. 12ರಿಂದ ನಾಪತ್ತೆಯಾಗಿರುವ ಅವರ ಪತ್ತೆಗಾಗಿ ತೀವ್ರ ಶೋಧ ನಡೆದಿದೆಯೆಂದು ವರದಿಯಾಗಿದೆ. ಅಂದು ಅವರು ಮದ್ರಾಸಿನ ತಮ್ಮ ಶಿಷ್ಯರೊಬ್ಬರ ಮನೆಯಿಂದ ಉಡುಪಿಗೆಂದು ಹೇಳಿ ಹೊರಟವರು ಉಡುಪಿಗಾಗಲಿ ಬೆಂಗಳೂರು–ಮಂಗಳೂರುಗಳಿಗಾಗಲಿ ತಲುಪಿಲ್ಲ ಎನ್ನಲಾಗಿದೆ.

ಈಚೆಗೆ ಸ್ವಾಮಿಗಳು ಕೆನಡಾ, ಅಮೆರಿಕಾಗಳಿಗೆ ಪ್ರವಾಸ ಹೋಗಿದ್ದನ್ನು ಮಠದ ಸಂಪ್ರದಾಯ ಶರಣರ ಗುಂಪು "ಧರ್ಮಶಾಸ್ತ್ರಕ್ಕೆ ವಿರುದ್ಧ" ಎಂದು ಟೀಕಿಸುತ್ತಿರುವುದಕ್ಕೆ ರೋಸಿ ಅವರು ಪೀಠ ತ್ಯಾಗ ಮಾಡಿದ್ದಾರೆ.

ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, "ಮಠದೊಳಗಿನ ಸಂಕುಚಿತ ಮನೋಭಾವ, ಸ್ವಾರ್ಥ, ಸಂಪ್ರದಾಯ ಹಾಗೂ ರಾಜಕೀಯ ವಾತಾವರಣಗಳಿಂದ ನಾನು ಬೇಸತ್ತಿದ್ದೇನೆ. ಮೌಲ್ಯಗಳ ಬಗ್ಗೆ ರಾಜಿಮಾಡಿಕೊಳ್ಳುವುದಕ್ಕಿಂತ ಪೀಠತ್ಯಾಗ ಲೇಸು" ಎಂದು ಈ ನಿರ್ಧಾರಕ್ಕೆ ಬಂದಿರುವುದಾಗಿ ನುಡಿದರು.

ತನ್ನ ಈ ನಿರ್ಧಾರ ಕ್ಯಾನ್ಸರ್‌ನಂತಹ ಮಾರಕವಾದ ಮೂಢ ನಂಬಿಕೆಗಳಿಂದ ಮಾಧ್ವ ಸಂಸ್ಥೆಗಳನ್ನು ಪಾರು ಮಾಡಿ ಪುನರುತ್ಥಾನಕ್ಕೆ ದಾರಿಯಾಗಬಹುದೆಂದೂ ಅವರು ಅಭಿಪ್ರಾಯಿಸಿದರು.

1970ರ ಬಳಿಕ ಪೀಠ ತ್ಯಾಗ ಮಾಡಿದ ಸ್ವಾಮಿಗಳ ಪೈಕಿ ವಿಶ್ವ ವಿಜಯ ತೀರ್ಥರು ಮೂರನೆಯವರು.

ಮಲೆನಾಡನ್ನು ತಲ್ಲಣಗೊಳಿಸಿದ ಕೊಲೆ, ದರೋಡೆ

(3ನೇ ಪುಟದಿಂದ)
ಯೊಡೆದು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಪ್ರಾಣ ಹಾರಿ ಹೋಗಿತ್ತು.

ತುರ್ತು ಪೋಲೀಸ್ ಕಾರ್ಯಾಚರಣೆ

ಕೂಡಲೇ ಹರಿಹರಪುರ ಠಾಣೆಗೆ ದೂರು ಮುಟ್ಟಿಸಲಾಯಿತು. ಸಬ್‌ಇನ್‌ಸ್ಪೆಕ್ಟರ್ ದುಗ್ಗಪ್ಪ, ತಕ್ಷಣ ಏಳೆಂಟು ಮಂದಿ ಪೋಲೀಸರೊಂದಿಗೆ, ಶಿವಮೊಗ್ಗಕ್ಕೆ ಬೆಳಿಗ್ಗೆ ಹೋಗಲು ಅಡಿಕೆ ತುಂಬಿ ನಿಲ್ಲಿಸಿದ್ದ ಗೋಪಾಲ ನಾಯ್ಕರ ಲಾರಿಯಲ್ಲೇ ಸ್ಥಳಕ್ಕೆ ಧಾವಿಸಿದರು. ಸ್ಥಳ ಪರಿಶೀಲನೆಯ ನಂತರ ತಕ್ಷಣನೇ ಮೇಲಧಿಕಾರಿಗಳಿಗೂ, ಶ್ವಾನ ದಳಕ್ಕೂ ಸುದ್ದಿ ಮುಟ್ಟಿಸಿ, ಪಾರ್ವತಮ್ಮನನ್ನು ಕೂಡಲೇ ಕೊಪ್ಪದ ಆಸ್ಪತ್ರೆಗೆ ಸಾಗಿಸಿದರು.

ಅನಂತರ ಚಿಂತಾಜನಕ ಸ್ಥಿತಿಯಲ್ಲಿದ್ದ ಅವರನ್ನು ಮಣಿಪಾಲಕ್ಕೆ ಸಾಗಿಸಲಾಯಿತು. ಅಲ್ಲಿ ಅವರು 11ರ ಸಂಜೆ ಕೊನೆಯುಸಿರೆಳೆದರು.

ಒಂದು ದೀರ್ಘ ದಿನ

ನ 11ರ ಬೆಳಿಗ್ಗೆ, ತರೀಕೆರೆಯ ನೂತನ ಡಿವೈ ಎಸ್ಪಿ ರಾಜೇಂದ್ರ ಪ್ರಸಾದ್, ಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ಸ್ಥಳಕ್ಕೆ ಧಾವಿಸಿದರು. ಮಧ್ಯಾಹ್ನದೊಳಗೆ ಶ್ವಾನದಳವೂ ಬಂತು. ಮನೆಯಿಂದ ಸ್ವಲ್ಪ ಮೇಲ್ಗಡೆ ಹಾಡ್ಯದಲ್ಲಿ ಹಲ್ಲೆಗೆ ಉಪಯೋಗಿಸಿದ್ದ ಮರದ ಪೆಟ್ಟಿ ಮಣೆಯನ್ನು (ನೆಲಕ್ಕೆ ಮಣ್ಣು ಹಾಕಿ ಮಟ್ಟ ಮಾಡಲು ಉಪಯೋಗಿಸುವುದು) ನಾಯಿ ಪತ್ತೆ ಮಾಡಿತು. ಅನಂತರ ಸಮೀಪದ ಅತ್ತಿಸರು ಬಸ್ ಸ್ಟಾಪ್‌ವರೆಗೆ ಹೋಗಿ ನಿಂತಿತು. ಮತ್ತ್ಯಾವ ಸುಳಿವೂ ಸಿಗಲಿಲ್ಲ. ಇಡೀ ದಿನ ಬೇರಾವ ಉಪಯುಕ್ತ ಮಾಹಿತಿಯೂ ದೊರೆಯಲಿಲ್ಲ.

ನಟನೆ, ಸುಳ್ಳಿನ ಸರಮಾಲೆ

"ನಾನು ಆಳುಗಳನ್ನು ಕಳಿಸಿ ವಾಪ್ಸು ಬರುವಾಗ ಯಾರೋ ಇಬ್ಬರು ಹೊಡೆಯಲು ಅಟ್ಟಿಸಿಕೊಂಡು ಬಂದರು. ಕೂಗುತ್ತಾ ತೋಟದ ಕಡೆ (ಬಂದ ದಾರಿಯಲ್ಲೇ ಹಿಂದಕ್ಕೆ) ಓಡಿದಾಗ ಒಬ್ಬ ಬಂದು ನನ್ನನ್ನು ದೂಡಿ ಹಳ್ಳಕ್ಕೆ ಬೀಳಿಸಿದ. ಮತ್ತೆ ಅವರು ಓಡಿ ಹೋದ ನಂತರ ಮನೆಗೆ ಬಂದಾಗ ಅಪ್ಪ-ಅಮ್ಮ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಓಡಿ ಹೋಗಿ ನೆರೆಕೆರೆಯವರಿಗೆ ಹೇಳಿದೆ. ಹಲ್ಲೆಕೋರರ ಗುರುತಿಲ್ಲ....."

"9 ಸಾವಿರ ರೂ. ಗ್ರಾಮೀಣ ಬ್ಯಾಂಕಿನಿಂದ ತಂದಿಟ್ಟಿದ್ದೆ. 16ನೇ ತಾರೀಖು ಅಪ್ಪನಿಗೆ ಪವಮಾನ ಶಾಂತಿ ಆಗಬೇಕಿತ್ತು. ಆ ಹಣ, 2 ಚಿನ್ನದ ಸರ ಕಳುವಾಗಿವೆ...."

—ಇವು ಸತ್ಯನಾರಾಯಣನ ಅಂದಿನ ಹೇಳಿಕೆಗಳು ನಡು ನಡುವೆ ಮಾನಸಿಕ ಆಘಾತದ, ಮಂಕು ಕವಿದ, ಹುಚ್ಚಿನ ನಟನೆ, ಫಿಟ್ಸ್ ಬಂದಂತೆ ಬೀಳುವುದು, "ಶಶೀ, ಶಶೀ ಬಾರೋ...." ಮುಂತಾದ ಚೀರಾಟ....ಇತ್ಯಾದಿ ನಡೆದಿತ್ತು.

ಗುಮಾನಿಗಳು

ಜುಲೈನಲ್ಲಿ ರಾಮಕೃಷ್ಣಯ್ಯನವರಿಗೆ ಗ್ರಾಮೀಣ ಬ್ಯಾಂಕಿನಿಂದ 9 ಸಾವಿರ ರೂ ಬೆಳೆ ಸಾಲ ಸಿಕ್ಕಿದ್ದು, ಅದರಲ್ಲಿ 6 ಸಾವಿರ ರೂ. ಈತನ ಖಾತೆಗೆ ವರ್ಗಾವಣೆಯಾಗಿದೆ. ಅದರಿಂದ 5 ಸಾವಿರ ರೂ. ಡ್ರಾ ಮಾಡಿದ್ದಾನೆ. "ಅಣ್ಣೇಗೌಡರ ಮಗ ಜಯಪ್ರಕಾಶನಿಗೆ (ಜಯರಾಮನ ಅಣ್ಣ, ಈಗ ಮುಂಬಯಿಯಲ್ಲಿದ್ದಾನೆ) ಕೊಟ್ಟಿದ್ದೆ. ಪವಮಾನ ಶಾಂತಿಗೋಸ್ಕರ ವಾಪ್ಸು ಪಡೆದಿದ್ದೆ" ಎಂದೂ ಹೇಳಿದ. (ಇದು ಬಹುತೇಕ ಸತ್ಯ.) ಆದರೆ ದರೋಡೆಕೋರರ ಸುಳಿವು ಬಿಟ್ಟು ಕೊಡಲಿಲ್ಲ. ಪೋಲೀಸರಿಗೂ, ನೆರೆದಿದ್ದವರಿಗೂ ಆತನದು ಬರೀ ನಟನೆಯೆಂದೂ, ಆತನಿಗೆ ಎಲ್ಲಾ ವಿಷಯ ಗೊತ್ತಿದೆ ಎಂದೇ ಖಚಿತವಾಗಿ ಅನ್ನಿಸಿತ್ತು.

ಶಶಿ ಬೆಳಿಗ್ಗೆ ಬಂದು ಹರಿಹರಪುರ ಆಸ್ಪತ್ರೆಗೆ ಒಯ್ಯಲಾಗಿದ್ದ ಇವನನ್ನು ನೋಡಿಕೊಂಡು, ಅಂಗಡಿ ಬಾಗಿಲು ತೆರೆಯಲು ಯಾರೂ ಇಲ್ಲವೆಂದು ಹೋದವನು 2-3 ಬಾರಿ ಹೇಳಿ ಕಳಿಸಿದರೂ ಬರದಿದ್ದುದಕ್ಕೆ ಆತನ ಮೇಲೂ ಗುಮಾನಿ ಉಂಟಾಗಿತ್ತು. ಆದರೆ ರಾತ್ರಿ ಆತ ಬಂದು ಈತನ ಸ್ನೇಹ ಹೇಗೆ ಕೇವಲ ಔಪಚಾರಿಕವಾದುದು ಹಾಗೂ ಒಬ್ಬ ಖಾಯಂ ಗಿರಾಕಿಯೊಂದಿಗೆ ಇರುವಂಥದು ಎಂಬುದನ್ನು ವಿವರಿಸಿದಾಗ ಎಲ್ಲರಿಗೂ ಆತನ ಬಗೆಗಿದ್ದ ಸಂಶಯ ನಿವಾರಣೆಯಾಯಿತು. (ಈ ವರದಿ ಬರೆಯುತ್ತ-ಅಚ್ಚಾಗುತ್ತ ಇರುವಂತೆಯೇ ಬೆಳವಣಿಗೆಗಳೂ ಆಗುತ್ತಿವೆ. ಹಾಗಾಗಿ ಶಶಿಯ ಮೇಲೆ ಅವರಿಗೆ ಇದ್ದ ಗುಮಾನಿ ಪುಟ 3ರಲ್ಲಿ ಕಾಣಿಸಿಕೊಂಡಿದೆ. ಅದೇ ರೀತಿ, ರವಿ ಎಂಬುದು ಕೇವಲ ಕಾಲ್ಪನಿಕ ಹೆಸರೆ? ಎಂಬುದೂ ಗೊತ್ತಾಗಿಲ್ಲ. —ಸಂ.)

ಮಾಹಿತಿಯ ಅಣೆಕಟ್ಟಿನಲ್ಲಿ ಬಿರುಕು

ಮರುದಿನ (ನ. 12) ಬೆಳಿಗ್ಗೆ ಸತ್ಯನಾರಾಯಣನಿಗೆ ಅವನ ತಾಯಿಯ ನಿಧನದ ಸುದ್ದಿ ತಿಳಿಯಿತು. ಜೊತೆಗೆ 'ಶಶಿಯನ್ನು ಗುಮಾನಿಯ ಮೇಲೆ ಬಂಧಿಸಲಾಗಿದೆ' ಎಂದು ಹೇಳಿದಾಗ ಅವನಲ್ಲಿದ್ದ ಮಾಹಿತಿಯ ಆಣೆಕಟ್ಟು ಬಿರುಕು ಬಿಟ್ಟು, ಮಾಹಿತಿ ಒಸರತೊಡಗಿತು.

"ಇನ್ನೇನು? ಎಲ್ಲ ಹೇಳಿ ಬಿಡೋದೇ.... ಅವನೇ, ಅವನೇ.... ರವಿ.... ರವಿ...." ಎಂದು ಬಡಬಡಿಸಿದವನು, ಅನಂತರ "ಜಯರಾಮ.. .. ಜಯರಾಮ.... ಬಂದಿದ್ದ.... ಅವನೇ...." ಮುಂತಾಗಿ ಬಡಬಡಿಸುತ್ತ ಓಡಿ ಹೋಗಿ ಅಂಗಳದಿಂದ ಆರೆಂಟು ಅಡಿ ಕೆಳಗಿನ ತಗ್ಗಿಗೆ ಧೊಪ್ಪೆಂದು ಬಿದ್ದ.

ಅವನನ್ನೆತ್ತಿ ಶೈತ್ಯೋಪಚಾರ ಮಾಡಿ, ಡಿವೈಎಸ್ಪಿಯವರ ಬಳಿ ಕರೆ ತಂದಾಗ, ಜಯರಾಮ ಕೊಲೆಗಡುಕ.... ತನ್ನನ್ನೂ ಕೊಲ್ಲುವ ಬೆದರಿಕೆ ಹಾಕಿದ್ದಾನೆ....ಇತ್ಯಾದಿ ವಿಷಯ ತಿಳಿಸಿದ. ಅವನಿಂದ ಆತನ ವಿಳಾಸಗಳನ್ನು ತೆಗೆದುಕೊಂಡು, ತನಿಖೆ ಮುಂದುವರಿಯುತ್ತಿದೆ ಜೊತೆಗೆ ಈತ ಪದೇ ಪದೇ ಬೀಳುವುದು, ಓಡುವುದು ಮುಂತಾಗಿ ಮಾಡುತ್ತಿರುವುದರಿಂದ ಅವನನ್ನು ಪೋಲೀಸರೇ ತಮ್ಮ ರಕ್ಷಣೆಗೆ ತೆಗೆದುಕೊಳ್ಳಲೆಂಬ ಅವನ ಸೆಂಟರಿಪ್ಪರ ಅಪೇಕ್ಷೆಯಂತೆ ಅವನೀಗ ಪೋಲೀಸ್ 'ರಕ್ಷಣೆ'ಯಲ್ಲಿದ್ದಾನೆ.

ಕೆಲವು ನಿಗೂಢ ಅಂಶಗಳು

ಸತ್ಯನಾರಾಯಣ ನೇರವಾಗಿಯೋ ಪರೋಕ್ಷವಾಗಿಯೋ ಶಾಮೀಲಾಗಿಯೇ ಪ್ರಕರಣ ನಡೆದಿದೆಯೆಂಬ ಗುಮಾನಿಗೆ ಪುಷ್ಟಿ ಕೊಡುವ ಹಲವು ನಿಗೂಢ ಅಂಶಗಳು ಈ ಪ್ರಕರಣದಲ್ಲಿವೆ.

ಅವನ ಅಸಂಬದ್ಧ ನಟನೆ, ಆರಂಭದಿಂದಲೂ ಗಳಿಗೆಗೊಂದು ಥರ ಬದಲಿಸುತ್ತಿರುವ ಹೇಳಿಕೆಗಳು, ನೆರೆಹೊರೆಯಲ್ಲಿ ಬೇರೆ ಯಾರೊಂದಿಗೂ ಬೆರೆಯದೆ ಜಯರಾಮನೊಡನೆ ನಡೆಸುತ್ತಿದ್ದ ಅನುಮಾನಾಸ್ಪದ ಓಡಾಟ ಮತ್ತು ವ್ಯವಹಾರಗಳು; ನಿಜವಾದ ದರೋಡೆಕೋರರಾಗಿದ್ದರೆ ಕೈಗೆ ಸಿಕ್ಕಿದ ಇವನಿಗೂ ತಲೆ ಒಡೆಯದೆ ಬರೀ ದೂಡಿ ಓಡುತ್ತಿದ್ದರೆ? (ಬೇರಾರ ಭಯವಾಗಲಿ, ಅರ್ಜೆಂಟ್ ಆಗಲಿ ಇರಲಿಲ್ಲ); ಅವನು ಮನೆಗೆ ಬಂದು ದುರಂತ ನೋಡಿದವನು ನೆರೆಕೆರೆಯವರ ಮನೆಗೆ ಹೋಗಲು ಬೇರೆ ದಾರಿ ಇದ್ದಾಗ, ಅವರು ಓಡಿದ ದಾರಿಯಲ್ಲೇ ಹೇಗೆ ಧೈರ್ಯವಾಗಿ ಹೋದ? ಬಂಗಾರದ ಸರಗಳು ಹಾಗೂ ಅವನು ಹೇಳುವಷ್ಟು ನಗದು ನಿಜವಾಗಿಯೂ ಇದ್ದುವೆ?

ಘಟನೆ ನಡೆದ ರಾತ್ರಿ 8 ಗಂಟೆಯ ಹೊತ್ತಿಗೆ ಕಮ್ಮರಡಿಯಿಂದ ಅಡಿಕೆ ಸುಲಿಯುವವರಿಗಾಗಿ ಬ್ರೆಡ್ ಮುಂತಾದುವನ್ನು ಕೊಂಡುಕೊಂಡು ಅರುಣ ಎಂಬವನ ಹತ್ತಿರ ಕೊಟ್ಟು ಅವನನ್ನು ಮುಂದೆ ಬಸ್ಸಿಗೆ ಕಳಿಸಿ, ತಾನು ನಾಲ್ಕು ಮಸಾಲೆ ದೋಸೆ ಕಟ್ಟಿಸಿಕೊಂಡು ನಿಧಾನವಾಗಿ ಬಂದಿದ್ದಾನೆ. ಯಾರಿಗಾಗಿ? ಜಯರಾಮ (ಅಥವಾ ಯಾರೇ ಕೊಲೆಗಡುಕ) ಮನೆಯ ಬಳಿ ಕಾಡಿನಲ್ಲಿ ಅಡಗಿದ್ದನೆ? ಅವನಿಗಾಗಿ ದೋಸೆ ತಂದಿದ್ದೆ?

ನಿಜವಾದ ಕೊಲೆಗಾರ ಅಥವಾ ದರೋಡೆಕೋರ ತನ್ನದೇ ಆಯುಧ ತಂದಿರುತ್ತಾನೆ. ಬರಿಗೈಯಲ್ಲಿ ಬಂದು ಇವರ ಮನೆಯಿಂದಲೇ ಆಯುಧವೊಂದನ್ನು ಹುಡುಕಿಕೊಳ್ಳುತ್ತಾನೆಯೆ? ಮೃತರ ಮತ್ತು ಅವರ ಪತ್ನಿಯ ಮೈಮೇಲಿದ್ದ ಬಂಗಾರದ ನಗಗಳು, ಪೆಟ್ಟಿಗೆಯಲ್ಲಿದ್ದ – ಪವಮಾನ ಶಾಂತಿಗೆಂದು ತಂದಿದ್ದ-ಬೆಳ್ಳಿಯ ಪಾತ್ರೆ ಇತ್ಯಾದಿ ಬೆಲೆಬಾಳುವ ವಸ್ತುಗಳು ಎಲ್ಲ ಹಾಗೇ ಇವೆ; ಕಳ್ಳ ಅವನ್ನೇಕೆ ಒಯ್ಯಲಿಲ್ಲ?

ಇತ್ಯಾದಿ ಇತ್ಯಾದಿ ನಿಗೂಢಗಳು ಇಷ್ಟರಲ್ಲೇ ಬಗೆಹರಿಯಬಹುದು.

ಪೋಲೀಸರಿಗೆ ಅಪಾರ ಮೆಚ್ಚುಗೆ

ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸಿದ್ದಾರೆ. ಹರಿಹರಪುರ ಸಬ್‌ಇನ್‌ಸ್ಪೆಕ್ಟರ್ ಎಚ್. ಟಿ ದುಗ್ಗಪ್ಪ, ಸರ್ಕಲ್ ಇನ್‌ಸ್ಪೆಕ್ಟರ್, ಡಿವೈಎಸ್ಪಿ ಮತ್ತು ಇತರ ಪೋಲೀಸರು ಹಾಗೂ ಶ್ವಾನ ದಳದವರು ಅತ್ಯಂತ ತ್ವರಿತವಾಗಿ ಕಾರ್ಯಾಚರಣೆ ನಡೆಸಿದ್ದು, ಬಹಳ ಜಾಣ್ಮೆಯಿಂದ ತನಿಖೆ ನಡೆಸುತ್ತಿರುವುದು—ಇದೆಲ್ಲ ಗ್ರಾಮಸ್ಥರ ಅಪಾರ ಮೆಚ್ಚುಗೆ ಗಳಿಸಿದೆ; ಜೊತೆಗೆ ತಲ್ಲಣಗೊಂಡಿದ್ದ ಅವರ ಮನಸ್ಸಿನಲ್ಲಿ ಧೈರ್ಯ, ಭರವಸೆಗಳನ್ನೂ ಮೂಡಿಸಿದೆ. ದುಗ್ಗಪ್ಪನವರ ಬಗೆಗಂತೂ ವಿಶೇಷ ಮೆಚ್ಚುಗೆ ವ್ಯಕ್ತವಾಗಿದೆ. ಎಲ್ಲರೂ ತನಿಖೆಯ ಫಲಿತಾಂಶಕ್ಕಾಗಿ ತುದಿಗಾಲ ಮೇಲೆ ಕಾದಿದ್ದಾರೆ. ಇನ್ನು ಒಂದೆರಡು ದಿನದೊಳಗೇ ಇಡೀ ಪ್ರಕರಣ ಬಯಲಾಗುವ ನಿರೀಕ್ಷೆ ಇದೆ.

ಬಿ. ಪಿ. ರಮೇಶ್ ಕಾಫಿ ಮಂಡಳಿಗೆ ಸಣ್ಣ ಬೆಳೆಗಾರರ ಪ್ರತಿನಿಧಿ

ಕೊಪ್ಪ: ಈ ತಾಲ್ಲೂಕಿನ ಬೇಳಿಗದ್ದೆಯವ ಗಾಢ ಬಿ. ಪಿ. ರಮೇಶ್ ಕಾಫಿ ಮಂಡಳಿಗೆ ಸಣ್ಣ ಬೆಳೆಗಾರರ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ.

ಶಿವಮೊಗ್ಗ ಧಾರಣೆ

ದಿನಾಂಕ : 1[illegible]-11-1987

ಕೆಂಪುಗೋಟು ರೂ. 925ರಿಂದ 1165

ಬಿಳಿಗೋಟು ರೂ. 742ರಿಂದ 950

ಸಿಪ್ಪೆ ಗೋಟು ರೂ 489ರಿಂದ 689

ಕಾಳು ಮೆಣಸು ರೂ. 51ರಿಂದ 52

ಮಂಗಳೂರು ತಾ|| 13-11-1987

ರೂ. 80 – 120

ಸಾಗರ ಅಡಿಕೆ ತಾ|| 11.11.87

ಇಡಿ ಅಡಿಕೆ ರೂ. 2169-2325

ಚಾಲಿ ರೂ. 1132-1375

ಸಿಪ್ಪೆ ಗೋಟು ರೂ. 409-626

ಆಪಿ ರೂ. 4091-4390

ಮೆಣಸು ರೂ 5035

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. [illegible] ಕೊಪ್ಪ